National
Kannada
13.10.2026: 19.35hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು :</u>

1. **ರಾಷ್ಟ್ರೀಯ ಭದ್ರತೆಯು ಇಂದು ಮಿಲಿಟರಿ ಸಾಮರ್ಥ್ಯ ಮೀರಿ ವಿಸ್ತರಿಸಿದೆ - ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಮತ**
2. **ಲಡಾಖ್, ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗ - ಭಾರತ ಪುನರುಚ್ಚಾರ**
3. **ನವದೆಹಲಿಯಲ್ಲಿಂದು ಜೆಕ್ ಗಣರಾಜ್ಯದ ಉಪ ಪ್ರಧಾನಿಯೊಂದಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತುಕತೆ**
4. **ಕೇಂದ್ರ ಸಚಿವ ಸ್ಥಾನ, ರಾಜ್ಯಸಭಾ ಸದಸ್ಯತ್ವಕ್ಕೆ ಡಾ. ಎಲ್.ಮುರುಗನ್ ರಾಜೀನಾಮೆ**

***********

ರಾಷ್ಟ್ರೀಯ ಭದ್ರತೆಯು ಇಂದು ಮಿಲಿಟರಿ ಸಾಮರ್ಥ್ಯ ಮೀರಿ ವಿಸ್ತರಿಸಿದೆ. ನಾವೀನ್ಯತೆಯನ್ನು ಪ್ರಾಯೋಗಿಕ ಪರಿಹಾರಗಳಾಗಿ ಪರಿವರ್ತಿಸಲು ವೈಜ್ಞಾನಿಕ ಸಂಸ್ಥೆಗಳು ಮತ್ತು ಸಶಸ್ತ್ರ ಪಡೆಗಳ ನಡುವೆ ನಿಕಟ ಸಹಕಾರ ಅಗತ್ಯವಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದರು. ರಾಷ್ಟ್ರಪತಿ ಭವನದಲ್ಲಿಂದು ೬೬ನೇ ರಾಷ್ಟ್ರೀಯ ರಕ್ಷಣಾ ಕಾಲೇಜು ಕೋರ್ಸ್‌ನ ಅಧ್ಯಾಪಕರು ಮತ್ತು ಕೋರ್ಸ್ ಸದಸ್ಯರೊಂದಿಗೆ ಸಂವಾದ ನಡೆಸಿದ ಅವರು, ಭದ್ರತೆ ಮತ್ತು ತಾಂತ್ರಿಕ ಅಂಶಗಳು ವೇಗವಾಗಿ ಬದಲಾಗುತ್ತಿವೆ. ಹೊಸ ಮತ್ತು ಸಂಕೀರ್ಣ ಸವಾಲುಗಳು ಎದುರಾಗುತ್ತಿವೆ ಎಂದು ಹೇಳಿದರು. ಈ ಬೆಳವಣಿಗೆಗಳು ಹೆಚ್ಚಿನ ಸಿದ್ಧತೆ, ಕಾರ್ಯತಂತ್ರದ ದೂರದೃಷ್ಟಿ ಮತ್ತು ಬದಲಾಗುತ್ತಿರುವ ಸಂದರ್ಭಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯದ ಅಗತ್ಯವಿದೆ. ಆಧುನಿಕ ಯುದ್ಧ ತಂತ್ರಗಳು, ಸೈಬರ್ ಭದ್ರತೆ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಕ್ಕೆ ವಿಸ್ತರಿಸುವುದರಿಂದ ವೇಗವಾಗಿ ನಿರ್ಧಾರ ತೆಗೆದುಕೊಳ್ಳುವ ಕಾರ್ಯವಿಧಾನವು ಹೆಚ್ಚು ಮಹತ್ವದ್ದಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟರು.

*********

ಲಡಾಖ್, ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗವಾಗಿದೆ. ಚೀನಾ ಕಡೆಯಿಂದ ಎಷ್ಟೇ ನಿರಾಕರಣೆಗಳು ಬಂದರೂ ಈ ಸ್ಥಾಪಿತ ಸತ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಭಾರತ ಪುನರುಚ್ಚರಿಸಿದೆ. ಲಡಾಖ್ ಕುರಿತು ಚೀನಾ ಇತ್ತೀಚೆಗೆ ನೀಡಿರುವ ಹೇಳಿಕೆಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿರುವ ೨೮ ಸ್ಥಳಗಳನ್ನು ಸರ್ವೇ ಆಫ್ ಇಂಡಿಯಾದ ಅಧಿಕೃತ ನಕ್ಷೆಯಲ್ಲಿ ಪ್ರಮಾಣಿತ ಸ್ಥಳನಾಮಗಳು ಮತ್ತು ವೈಶಿಷ್ಟ್ಯದ ಹೆಸರುಗಳೊಂದಿಗೆ ಗುರುತಿಸಲಾಗಿದೆ ಎಂದು ಗೃಹ ಸಚಿವಾಲಯದ ಪತ್ರಿಕಾ ಪ್ರಕಟಣೆ ಈಗಾಗಲೇ ಸ್ಪಷ್ಟಪಡಿಸಿದೆ ಎಂದು ಹೇಳಿದರು. ಲಡಾಖ್ ಆಡಳಿತ ಮತ್ತು ಸ್ಥಳೀಯ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಿ, ಈ ಕ್ರಮ ಕೈಗೊಳ್ಳಲಾಗಿದೆ. ಸರ್ವೇ ಆಫ್ ಇಂಡಿಯಾದ ಲಡಾಖ್ ನಕ್ಷೆಯಲ್ಲಿ ಈ ಸ್ಥಳಗಳನ್ನು ಔಪಚಾರಿಕವಾಗಿ ಗುರುತಿಸುವ ಉದ್ದೇಶವು, ಅವುಗಳ ನಿಖರವಾದ ಗುರುತಿಸುವಿಕೆ ಹಾಗೂ ಸಾರ್ವಜನಿಕರಲ್ಲಿ ಉತ್ತಮ ಅರಿವು ಮೂಡಿಸಲು ಅನುಕೂಲ ಮಾಡಿಕೊಡುವುದಾಗಿದೆ ಎಂದು ರಣಧೀರ್ ಜೈಸ್ವಾಲ್ ತಿಳಿಸಿದರು.

*********

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನವದೆಹಲಿಯಲ್ಲಿಂದು ಜೆಕ್ ಗಣರಾಜ್ಯದ ಉಪ ಪ್ರಧಾನಿ ಹಾಗೂ ಕೈಗಾರಿಕಾ ಸಚಿವ ಕರೆಲ್ ಹಾವ್ಲಿಸೆಕ್ ಅವರನ್ನು ಭೇಟಿಯಾಗಿ, ಮಾತುಕತೆ ನಡೆಸಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಸಚಿವ ರಾಜನಾಥ್ ಸಿಂಗ್, ಆತ್ಮನಿರ್ಭರ ಭಾರತಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಭಾರತ-ಜೆಕ್ ಗಣರಾಜ್ಯ ಜಂಟಿ ರಕ್ಷಣಾ ಸಮಿತಿಯ ಅಡಿಯಲ್ಲಿ ಈ ಸಹಕಾರವನ್ನು ಮತ್ತಷ್ಟು ವಿಸ್ತರಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಸಭೆಯಲ್ಲಿ ರಕ್ಷಣಾ ಕೈಗಾರಿಕಾ ಸಹಕಾರದ ಸಮಗ್ರ ಆಯಾಮಗಳನ್ನು ಪರಿಶೀಲಿಸಲಾಯಿತು ಎಂದು ತಿಳಿಸಿದ್ದಾರೆ.

*********

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಡಾ. ಎಲ್.ಮುರುಗನ್ ಅವರು ತಮ್ಮ ಸಚಿವ ಸ್ಥಾನ ಮತ್ತು ರಾಜ್ಯಸಭಾ ಸದಸ್ಯತ್ವ ಎರಡಕ್ಕೂ ರಾಜೀನಾಮೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ, ದಿನಗೂಲಿ ಕಾರ್ಮಿಕರ ಮಗನಾಗಿರುವ ತಮಗೆ, ಪ್ರಧಾನಿಯವರ ನೇತೃತ್ವದ ಕೇಂದ್ರ ಸಚಿವ ಸಂಪುಟದಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ತಮ್ಮ ಜೀವನದ ಅತ್ಯಂತ ದೊಡ್ಡ ಸೌಭಾಗ್ಯ ಎಂದು ಡಾ. ಮುರುಗನ್ ತಿಳಿಸಿದ್ದಾರೆ. ತಾವು ತಳಮಟ್ಟದ ಕಾರ್ಯಚಟುವಟಿಕೆಗಳಿಗೆ ಮರಳಲು, ಪಕ್ಷದ

ಕಾರ್ಯಕರ್ತರೊಂದಿಗೆ ನಿಲ್ಲಲು ಮತ್ತು ೨೦೨೯ರ ಲೋಕಸಭಾ ಚುನಾವಣೆಗೂ ಮುನ್ನ ತಮಿಳುನಾಡಿನಲ್ಲಿ ಬಿಜೆಪಿ ಯನ್ನು ಬಲಪಡಿಸಲು ಪೂರ್ಣ ಸಮಯವನ್ನು ಮೀಸಲಿಡಲು ಬಯಸುವುದಾಗಿ ಅವರು ಹೇಳಿದ್ದಾರೆ.

*********

ಮಹಾರಾಷ್ಟ್ರದ ರತ್ನಗಿರಿಯಲ್ಲಿಂದು ಭಾರತೀಯ ಕರಾವಳಿ ರಕ್ಷಣಾ ಪಡೆಗೆ ದೇಶೀಯ ಅತ್ಯಾಧುನಿಕ ಲಘು ಹೆಲಿಕಾಪ್ಟರ್ ಸಿಜಿ-೮೭೫ ಸೇರ್ಪಡೆಗೊಂಡಿತು. ಸಾಂಪ್ರದಾಯಿಕ ಜಲಫಿರಂಗಿ ಮೂಲಕ ಈ ಹೆಲಿಕಾಪ್ಟರ್ ಅನ್ನು ಸ್ವಾಗತಿಸಲಾಯಿತು. ಈ ಸೇರ್ಪಡೆಯಿಂದ ಪಶ್ಚಿಮ ಕರಾವಳಿಯಲ್ಲಿ ಭಾರತೀಯ ಕರಾವಳಿ ರಕ್ಷಣಾ ಪಡೆಗಳ ಕಾರ್ಯಾಚರಣಾ ಸಾಮರ್ಥ್ಯ ಗಮನಾರ್ಹವಾಗಿ ವರ್ಧಿಸಲಿದೆ. ಈ ಹೆಲಿಕಾಪ್ಟರ್ ಅತ್ಯಾಧುನಿಕ ರಾಡಾರ್ ಹೊಂದಿದ್ದು, ಅದರ ಎಲೆಕ್ಟ್ರೋ ಆಪ್ಟಿಕಲ್ ಪಾಡ್ ಮತ್ತು ಸ್ವಯಂಚಾಲಿತ ಗುರುತಿನ ವ್ಯವಸ್ಥೆಯ ಮೂಲಕ ದೀರ್ಘ ಶ್ರೇಣಿಯ ಚಿತ್ರ ಸೆರೆಹಿಡಿಯುವಿಕೆ ಮತ್ತು ಗುರುತು ಪತ್ತೆ ಹಚ್ಚುವಿಕೆ ಸಾಮರ್ಥ್ಯಗಳೊಂದಿಗೆ ಸಂಯೋಜಿಸಲ್ಪಟ್ಟಿದೆ.

*********

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ಸಾಗರಮಾಲಾ' ಯೋಜನೆ  ಕುರಿತ ಒಂದು ವರದಿ ಇಲ್ಲಿದೆ. ೨೦೧೫ರಲ್ಲಿ ಪ್ರಾರಂಭವಾದ 'ಸಾಗರಮಾಲಾ' ಯೋಜನೆಯು ದೇಶದ ಕರಾವಳಿಯನ್ನು ಉತ್ಪಾದನೆ, ಮಾರುಕಟ್ಟೆ ಹಾಗೂ ಜನಜೀವನದೊಂದಿಗೆ ಬೆಸೆಯುವ ಮೂಲಕ ಆರ್ಥಿಕ ಪ್ರಗತಿಯ ಪ್ರಮುಖ ಚಾಲಕಶಕ್ತಿಯಾಗಿ ಪರಿವರ್ತಿಸುವ ಗುರಿ ಹೊಂದಿದೆ. ಬಂದರು ಆಧುನೀಕರಣ, ರಸ್ತೆ ಮತ್ತು ರೈಲು ಸಂಪರ್ಕ, ಬಂದರು ಆಧಾರಿತ ಕೈಗಾರೀಕರಣ, ಕರಾವಳಿ ಸಮುದಾಯಗಳ ಅಭಿವೃದ್ಧಿ ಹಾಗೂ ಒಳನಾಡಿನ ಜಲಸಾಗಾಣಿಕೆಯಂತಹ ಐದು ಪ್ರಮುಖ ಸ್ತಂಭಗಳ ಮೇಲೆ ಈ ಯೋಜನೆ ಕಾರ್ಯನಿರ್ವಹಿಸುತ್ತಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಯಡಿ ಒಟ್ಟು ೬.೦೬ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ೮೪೫ಕ್ಕೂ ಹೆಚ್ಚು ಯೋಜನೆಗಳನ್ನು ಗುರುತಿಸಲಾಗಿದ್ದು, ಈಗಾಗಲೇ ೩೧೫ ಯೋಜನೆಗಳು ಪೂರ್ಣಗೊಂಡಿವೆ. ಪ್ರಮುಖ ಬಂದರುಗಳಲ್ಲಿ ಹಡಗುಗಳ ನಿಲುಗಡೆ ಅವಧಿಯು ೨೦೧೪ರಲ್ಲಿದ್ದ ೯೬ ಗಂಟೆಗಳಿಂದ ೨೦೨೫ರ ವೇಳೆಗೆ ಸುಮಾರು ೪೯ ಗಂಟೆಗಳಿಗೆ ಇಳಿಕೆಯಾಗಿದೆ. ಇಂದು ವಿಶ್ವದ ಅಗ್ರ

೧೦೦ ಬಂದರುಗಳ ಪಟ್ಟಿಯಲ್ಲಿ ಭಾರತದ ಒಂಬತ್ತು ಬಂದರುಗಳು ಸ್ಥಾನ ಪಡೆದಿವೆ. ದೇಶದ ಶೇಕಡ ೯೫ರಷ್ಟು ವ್ಯಾಪಾರ ಕಡಲ ಮಾರ್ಗದ ಮೂಲಕವೇ ನಡೆಯುತ್ತಿದ್ದು, ೨೦೧೪ರಲ್ಲಿ ೮೭೩ ದಶಲಕ್ಷ ಟನ್‌ಗಳಷ್ಟಿದ್ದ ಪ್ರಮುಖ ಬಂದರುಗಳ ಸಾಮರ್ಥ್ಯ ೨೦೨೬ಕ್ಕೆ ೧ ಸಾವಿರದ ೭೨೮ ದಶಲಕ್ಷ ಟನ್‌ಗಳಿಗೆ ದ್ವಿಗುಣಗೊಂಡಿದೆ.

*********

ಭಾರತೀಯ ನೌಕಾಪಡೆ ಮತ್ತು ಸೈಪ್ರಸ್ ನೌಕಾಪಡೆ ನಡುವೆ ಪರಸ್ಪರ ಸಹಕಾರ ನಿಟ್ಟಿನಲ್ಲಿ ಸೈಪ್ರಸ್‌ನ ಮಾರಿ ನೌಕಾ ನೆಲೆಯಲ್ಲಿಂದು ಮಾತುಕತೆ ನಡೆಯಿತು. ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನೇತೃತ್ವದ ಭಾರತೀಯ ರಕ್ಷಣಾ ನಿಯೋಗ ಮತ್ತು ಸೈಪ್ರಸ್ ನೌಕಾ ಕಮಾಂಡ್‌ನ ಕಮಾಂಡರ್ ನಿಕೋಲಸ್ ಲುಕಾ ನೇತೃತ್ವದ ನಿಯೋಗಗಳ ನಡುವೆ ಚರ್ಚೆ ನಡೆಯಿತು. ಉಭಯ ದೇಶಗಳ ನೌಕಾಪಡೆಗಳ ನಡುವೆ ಮಾಹಿತಿ ವಿನಿಮಯ, ಕಡಲ ಭದ್ರತೆ, ಶೋಧ ಮತ್ತು ರಕ್ಷಣಾ ಸಮನ್ವಯ, ಜಂಟಿ ತರಬೇತಿ ಸೇರಿದಂತೆ ಪರಸ್ಪರ ಸಕಹಾರ ಬಲಪಡಿಸಲು ಎರಡೂ ಕಡೆಯವರು ಒಪ್ಪಿಕೊಂಡರು.

*********

ಬಲೂಚಿಸ್ತಾನದಲ್ಲಿ ಪಾಕಿಸ್ತಾನಿ ಪಡೆಗಳಿಂದ ಮಾನವ ಹಕ್ಕುಗಳ ಉಲ್ಲಂಘನೆ, ಅಪಹರಣ, ಹತ್ಯೆಗಳು ಮತ್ತು ಮಿಲಿಟರಿ ಆಕ್ರಮಣದ ವಿರುದ್ಧ ಜರ್ಮನಿಯ ಹ್ಯಾನೋವರ್‌ನಲ್ಲಿ ಬಲೂಚಿಸ್ತಾನ ರಾಷ್ಟ್ರೀಯ ಚಳವಳಿ ಸಂಘಟನೆ, ಪ್ರತಿಭಟನಾ ರ‍್ಯಾಲಿ ನಡೆಸಿತು. ಸ್ವತಂತ್ರ ತನಿಖೆ ಖಚಿತಪಡಿಸಿಕೊಳ್ಳಲು, ಹೊಣೆಗಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಬಲೂಚ್ ರಾಷ್ಟ್ರದ ಸ್ವಾಯತ್ತ ಹಕ್ಕನ್ನು ಎತ್ತಿಹಿಡಿಯಲು ಅಂತಾರಾಷ್ಟ್ರೀಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರತಿಭಟನಾಕಾರರು ಅಂತಾರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದರು. ಬಲೂಚ್ ಪ್ರಾಂತ್ಯದಲ್ಲಿ ಮಿಲಿಟರಿ ವೈಮಾನಿಕ ದಾಳಿಗಳು ಮತ್ತು ಡ್ರೋನ್ ದಾಳಿಗಳಿಂದ ಉಂಟಾದ ಸಾವು-ನೋವು ಸೇರಿದಂತೆ ನಾಗರಿಕ ಸಾವುಗಳ ಬಗ್ಗೆ ಸ್ವತಂತ್ರ ತನಿಖೆಗೆ ಪ್ರತಿಭಟನಾಕಾರರು ಆಗ್ರಹಿಸಿದರು.

*********

೨೦೨೭ರಲ್ಲಿ ಭಾರತ ಜಿಡಿಪಿ ಬೆಳವಣಿಗೆ ಶೇಕಡ ೭ಕ್ಕೆ ಏರಲಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ಅಂದಾಜಿಸಿ ಪ್ರಕಟಿಸಿರುವ ವರದಿಯನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಶ್ಲಾಘಿಸಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶದ ಮುಕ್ತ ವ್ಯಾಪಾರ ಒಪ್ಪಂದಗಳು ಜಾಗತಿಕ, ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತಿವೆ ಮತ್ತು ಪೂರೈಕೆ ಸರಪಳಿ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುತ್ತಿದೆ ಎಂದು ಹೇಳಿದರು. ಇಂಧನ ಮತ್ತು ಆಹಾರ ಬೆಲೆಗಳ ಏರಿಕೆ ಹಾಗೂ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆ ಜಾಗತಿಕ ಆರ್ಥಿಕತೆ ಹೆಚ್ಚು ದುರ್ಬಲಗೊಳ್ಳುತ್ತಿದೆ ಎಂಬ ಐಎಂಎಫ್ ಎಚ್ಚರಿಕೆಯ ಹೊರತಾಗಿಯೂ ಭಾರತದ ಬೆಳವಣಿಗೆ ಆಶಾದಾಯಕವಾಗಿದೆ.

******END*******